# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ.

ಕವಿಪ್ರನಿನಿ/ಬಿ. B93/ 35989/ 2016-17

ನಿಗಮ ಕಾರ್ಯಾಲಯ, ಕಾವೇರಿ ಭವನ,
ಬೆಂಗಳೂರು. ದಿನಾಂಕ: 21-2-2017

**NDCPS ಅಧಿಕಾರಿಗಳ / ನೌಕರರ**
**ವೈಯಕ್ತಿಕ ಗಮನಕ್ಕೆ**

## ಸುತ್ತೋಲೆ

ವಿಷಯ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಯ ಕವಿಪ್ರನಿನಿ / ವಿಸಕಂಗಳ ನೌಕರರು / ಅಧಿಕಾರಿಗಳು ಅವರ ಖಾಯಂ ವಿಶ್ರಾಂತಿ ವೇತನ ಸಂಖ್ಯೆ (PPAN) ಖಾತೆಯಲ್ಲಿ ಜಮಾ ಇರುವ ಪಿಂಚಣಿ ವಂತಿಗೆಯ ವಿವರಗಳನ್ನು ಪಡೆದು ಪರಿಶೀಲಿಸಿಕೊಳ್ಳುವ ಬಗ್ಗೆ.

ಉಲ್ಲೇಖ೧. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 4/ಪಿಇಟಿ 2005 ದಿನಾಂಕ 31-03-2003
೨. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/ಬಿ.14/ 4977/2005-06 ದಿನಾಂಕ 05-07-2007
೩. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/ 4977/2005-06 ದಿನಾಂಕ 21-08-2007

*****

ಉಲ್ಲೇಖ 2 ರಲ್ಲಿರುವ ನಿಗಮದ ಆದೇಶದಲ್ಲಿ, ಕವಿಪ್ರನಿನಿ / ವಿಸಕಂಗಳಲ್ಲಿ ದಿನಾಂಕ 01-04-2006 ರಂದು ಮತ್ತು ನಂತರ ಸೇವೆಗೆ ಸೇರುವ ಅಧಿಕಾರಿ / ನೌಕರರಿಗೆ ಅನ್ವಯವಾಗುವಂತೆ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯನ್ನು (NDCPS) ಜಾರಿಗೆ ತರಲಾಗಿರುತ್ತದೆ. ಈ ಯೋಜನೆಯಡಿ ಸಂಬಂಧಿಸಿದ ನೌಕರರು / ಅಧಿಕಾರಿಗಳಿಂದ ಮೂಲ ವೇತನ (ಡಿ.ಪಿ. ಒಳಗೊಂಡಂತೆ) ಮತ್ತು ತುಟ್ಟಿಭತ್ಯೆಯ ಮೊತ್ತದ ಮೇಲೆ ಶೇಕಡ 10 ರಷ್ಟು ವಂತಿಗೆ ಪಡೆದು ಅದಕ್ಕೆ ಸಮನಾದ ಕಂಪನಿಯ ವಂತಿಗೆಯನ್ನು ನಿಧಿಯಲ್ಲಿ ಜಮಾವಣೆ ಮಾಡಲಾಗುತ್ತಿದೆ.

ನಿಗಮದ ದಿನಾಂಕ 04-05-2015 ರ ಆದೇಶದ ಪ್ರಕಾರ ಸದರಿ ಯೋಜನೆಯ ನಿರ್ವಹಣೆಯನ್ನು LIC-P&GS Unit ಗೆ ವಹಿಸಲಾಗಿದೆ. LIC-P&GS Unit ಸಂಸ್ಥೆಯು ನೌಕರವಾರು / ತಿಂಗಳವಾರು ಪಿಂಚಣಿ ವಂತಿಗೆ ವಿವರಗಳನ್ನು ಯೋಜನೆ ವ್ಯಾಪ್ತಿಯ ಫಲಾಭವಿಗಳು ತಂತ್ರಾಂಶದ ಮೂಲಕ ವೀಕ್ಷಿಸಲು ಅಗತ್ಯ

ಏರ್ಪಾಡುಗಳನ್ನು ಮಾಡಬೇಕಿರುತ್ತದೆ. ಈ ಸಂಬಂಧ LIC ಸಂಸ್ಥೆಯು ಮಾರ್ಚ್ 2017 ರ ಅಂತ್ಯದೊಳಗಾಗಿ ಅಗತ್ಯ ತಂತ್ರಾಂಶವನ್ನು ಅಭಿವೃದ್ಧಿ ಪಡಿಸುತಲಿದ್ದು ಆ ನಂತರ ನೌಕರವಾರು / ತಿಂಗಳವಾರು ಪಿಂಚಣಿ ವಂತಿಗೆ ವಿವರಗಳನ್ನು ಬಡ್ಡಿ ಗಳಿಕೆಯ ಸಹಿತ ಯೋಜನೆಯ ಫಲಾನುಭವಿಗಳು ತಿಳಿಯಬಹುದಾಗಿದೆ.

ನಿಗಮದ ಉಲ್ಲೇಖ 3 ರಲ್ಲಿರುವ ಆದೇಶದ ಕಂಡಿಕೆ 19 ರಲ್ಲಿ ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

*"ಪ್ರತಿಯೊಂದು ಹಣಕಾಸು ವರ್ಷದ ಕೊನೆಯಲ್ಲಿ ಟ್ರಸ್ಟ್‌ಗಳು ಪ್ರತಿಯೊಬ್ಬ ನೌಕರನಿಗೆ ಸಂಬಂಧಿಸಿದಂತೆ, ಪ್ರಾರಂಭಿಕ ಶಿಲ್ಕು, ಮಾಸಿಕ ಕಟಾವಣೆಗಳ ವಿವರಗಳು ಮತ್ತು ಕವಿಪ್ರನಿನಿ / ಎಸ್ಕಾಂ ಗಳ ಕೊಡುಗೆ, ಗಳಿಸಿದ ಅಂದಾಜು ಬಡ್ಡಿ ಏನಾದರೂ ಇದ್ದಲ್ಲಿ ಮತ್ತು ಮುಕ್ತಾಯ ಶಿಲ್ಕನ್ನು ತೋರಿಸುವ ವಾರ್ಷಿಕ ಲೆಕ್ಕಗಳ ವಿವರಣಾ ಪಟ್ಟಿಗಳನ್ನು ಸಿದ್ಧಪಡಿಸತಕ್ಕದ್ದು. ವಿವರಣಾ ಪಟ್ಟಿಗಳನ್ನು ಸಂಬಂಧಪಟ್ಟ ಹಣ ತೆಗೆಯುವ ಮತ್ತು ಬಟವಾಡೆ ಅಧಿಕಾರಿಗಳಿಗೆ ಕಳುಹಿಸತಕ್ಕದ್ದು. ಅವರು ಸೂಕ್ತ ಸ್ವೀಕೃತಿಯನ್ನು ಪಡೆದು ಖಾತೆಗಳ ವಿವರಣಾ ಪಟ್ಟಿಗಳನ್ನು ನೌಕರರಿಗೆ ನೀಡುವ ವ್ಯವಸ್ಥೆ ಮಾಡತಕ್ಕದ್ದು"*

ಈ ಮೇಲೆ ನಿಗದಿಪಡಿಸಿರುವ ಕಾರ್ಯವನ್ನು ಪೂರ್ಣಗೊಳಿಸಲು ನೌಕರವಾರು / ತಿಂಗಳವಾರು ಪಿಂಚಣಿ ವಂತಿಗೆ ವಿವರಗಳನ್ನು ಈ ಯೋಜನೆಯ ಎಲ್ಲಾ ಫಲಾನುಭವಿಗಳಿಗೆ ಒದಗಿಸುವ ಜವಾಬ್ದಾರಿಯನ್ನು ಕೆಇಎನ್‌ಡಿಸಿಪಿಎಸ್ ಘಟಕ ಮತ್ತು ವೇತನ ಬಟವಾಡೆ ಅಧಿಕಾರಿಗಳು ನಿರ್ವಹಿಸಬೇಕಿದೆ. ಕೆಇಎನ್‌ಡಿಸಿಪಿಎಸ್ ಘಟಕವು ನೀಡಿರುವ ನೌಕರವಾರು / ತಿಂಗಳವಾರು ಪಿಂಚಣಿ ವಂತಿಗೆ ವಿವರಗಳನ್ನು LIC ಸಂಸ್ಥೆಯು ಅವರ ತಂತ್ರಾಂಶದಲ್ಲಿ ಅಳವಡಿಸಿ ಬಡ್ಡಿ ಹಂಚಿಕೆ ಮಾಡುವ ಪೂರ್ವಭಾವಿಯಾಗಿ ಪಿಂಚಣಿ ವಂತಿಗೆ ವಿವರಗಳನ್ನು ಕವಿಪ್ರನಿನಿಯ ಜಾಲತಾಣದಲ್ಲಿ ಪ್ರಕಟಿಸಿ ಈ ಯೋಜನೆಯ ಫಲಾನುಭವಿಗಳಿಂದ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಆಹ್ವಾನಿಸಲು ತೀರ್ಮಾನಿಸಲಾಗಿದೆ. ಅದರಂತೆ, ನೌಕರರ / ಅಧಿಕಾರಿಗಳ ಪಿಂಚಣಿ ವಂತಿಗೆ ವಿವರಗಳನ್ನು (ಬಡ್ಡಿ ಹೊರತುಪಡಿಸಿ) ಕವಿಪ್ರನಿನಿ ಜಾಲತಾಣದಲ್ಲಿ ಪ್ರಕಟಿಸಲಾಗಿದೆ.

ಸಂಬಂಧಿಸಿದ ನೌಕರರು ಮತ್ತು ವೇತನ ಬಟವಾಡೆ ಅಧಿಕಾರಿಗಳು ದಿನಾಂಕ 01-04-2006 ರಿಂದ 30-06-2016 ರ ವರೆಗಿನ ಅವಧಿಯ ಪಿಂಚಣಿ ವಂತಿಗೆ ವಿವರಗಳನ್ನು ಜಾಲತಾಣ ಆಧಾರಿತ ತಂತ್ರಾಂಶದಲ್ಲಿ ವೀಕ್ಷಿಸಲು ಈ ಕೆಳಡಂಡ ಕ್ರಮಗಳನ್ನು ಅನುಸರಿಸುವಂತೆ ಸೂಚಿಸಲಾಗಿದೆ.

1. ಸದರಿ ತಂತ್ರಾಂಶವನ್ನು ಕವಿಪ್ರನಿನಿಯ ವೆಬ್ ಸೈಟ್‌ನಲ್ಲಿ ( kptcl.com NDCPS ➡ Contribution details from 04/2006 to 06/2016 ) ಪ್ರಕಟಿಸಲಾಗಿರುತ್ತದೆ.

2. Log-in screen ನಲ್ಲಿ Employer & Employee ಎನ್ನುವ ಎರಡು ಆಯ್ಕೆಗಳಿದ್ದು ಲೆಕ್ಕ ಘಟಕ / ಕಂಪನಿಗಳ ನಿಗಮ ಕಛೇರಿಯವರು Log-in ಆಗುವಾಗ Employer ಎನ್ನುವುದನ್ನು ಆಯ್ಕೆ ಮಾಡಿಕೊಳ್ಳಬೇಕು.

3. ವೇತನ ಬಟವಾಡೆ ಅಧಿಕಾರಿಗಳು ಜುಲೈ 2016 ರಿಂದ ನೂತನ **NDCPS** ತಂತ್ರಾಂಶದಲ್ಲಿ ನೌಕರರ ಪಿಂಚಣಿ ವಂತಿಗೆ ವಿವರಗಳನ್ನು ದಾಖಲಿಸಲು ಬಳಸುವ User Id & Password ಈ ತಂತ್ರಾಂಶಕ್ಕೂ ಬಳಸಬಹುದಾಗಿದೆ.

3(a) ತಂತ್ರಾಂಶಕ್ಕೆ Log-in ಆದ ನಂತರ ಗಣಕ ಯಂತ್ರದ ಪರದೆಯ ಮೇಲೆ Reports ಮತ್ತು Change password ಎನ್ನುವ ಶೀರ್ಷಿಕೆಗಳು ಕಾಣುತ್ತವೆ.

3(b) ಮೊದಲನೆಯ ಶೀರ್ಷಿಕೆ Reports ಅಡಿಯಲ್ಲಿ ಮೂರು ಉಪಶೀರ್ಷಿಕೆಗಳನ್ನು ಕಾಣಬಹುದು. ಅವುಗಳು

A. Monthly contribution
B. Contribution Abstract
C. Employee Contribution.

3(c) Monthly contribution ಉಪ ಶೀರ್ಷಿಕೆಯನ್ನು ಉಪಯೋಗಿಸಿಕೊಂಡು ಲೆಕ್ಕಘಟಕಗಳು ಅವರಿಗೆ ಬೇಕಾದ ಅವಧಿಯ ತಿಂಗಳವಾರು ವಂತಿಗೆ (ಅನುಬಂಧ –4) ರ ವಿವರಗಳನ್ನು ಪಡೆದುಕೊಳ್ಳಬಹುದು.

3 (d) Contribution Abstract ಉಪ ಶೀರ್ಷಿಕೆಯನ್ನು ಉಪಯೋಗಿಸಿಕೊಂಡು ಕಂಪನಿಯ ನಿಗಮ ಕಛೇರಿಯು ಅವರಿಗೆ ಬೇಕಾದ ಅವಧಿಗೆ ಲೆಕ್ಕಘಟಕವಾರು Contribution Abstract ವಿವರಗಳನ್ನು ಪಡೆದುಕೊಳ್ಳಬಹುದು.

3 (e) Employee contribution ಉಪ ಶೀರ್ಷಿಕೆಯನ್ನು ಉಪಯೋಗಿಸಿಕೊಂಡು ನೌಕರರ PPAN ನಮೂದಿಸಿ ಲೆಕ್ಕಘಟಕಗಳು ಅವರಿಗೆ ಬೇಕಾದ ನೌಕರರ ಪಿಂಚಣಿ ವಂತಿಗೆ ವಿವರಗಳನ್ನು ಬೇಕಾದ ಅವಧಿಗೆ ಪಡೆದುಕೊಳ್ಳಬಹುದು.

4. Log-in screen ನಲ್ಲಿ Employer & Employee ಎನ್ನುವ ಎರಡು ಆಯ್ಕೆಗಳಿದ್ದು ನೌಕರರು Log-in ಆಗಲು Employee ಎನ್ನುವುದನ್ನು ಆಯ್ಕೆ ಮಾಡಿಕೊಳ್ಳಬೇಕು.

ಮುಂದುವರೆಯಲು ನೌಕರರು User Id & Password ಗೆ ಮೀಸಲಾದ ಎರಡೂ ಜಾಗದಲ್ಲಿ ಅವರ PPAN ದಾಖಲಿಸಬೇಕು.

4(a) ತಂತ್ರಾಂಶಕ್ಕೆ Log-in ಆದ ನಂತರ ಗಣಕ ಯಂತ್ರದ ಪರದೆಯ ಮೇಲೆ Reports ಮತ್ತು Change password ಎನ್ನುವ ಶೀರ್ಷಿಕೆಗಳು ಕಾಣುತ್ತವೆ.

4(b) ಮೊದಲನೆಯ ಶೀರ್ಷಿಕೆ Reports ಅಡಿಯಲ್ಲಿ ಎರಡು ಉಪಶೀರ್ಷಿಕೆಗಳನ್ನು ಕಾಣಬಹುದು. ಅವುಗಳು

A. Annexure – 1 ಮತ್ತು B. Contribution Details

4(c) Annexure-1 ಉಪ ಶೀರ್ಷಿಕೆಯನ್ನು ಉಪಯೋಗಿಸಿಕೊಂಡು ನೌಕರರು ತಮ್ಮ ವೈಯಕ್ತಿಕ (ಅನುಬಂಧ–1) ವಿವರಗಳನ್ನು ಪಡೆದುಕೊಳ್ಳಬಹುದು.

4(d) Contribution Details ಉಪ ಶೀರ್ಷಿಕೆಯನ್ನು ಉಪಯೋಗಿಸಿಕೊಂಡು ನೌಕರರು ಅವರಿಗೆ ಬೇಕಾದ ಪಿಂಚಣಿ ವಂತಿಗೆ ವಿವರಗಳನ್ನು ಬೇಕಾದ ಅವಧಿಗೆ ಪಡೆದುಕೊಳ್ಳಬಹುದು.

ಈಗಾಗಲೇ ಮೇಲೆ ತಿಳಿಸಿರುವಂತೆ, ಎಲ್ಲಾ ಲೆಕ್ಕ ಘಟಕಗಳು ಮತ್ತು ಈ ಯೋಜನೆಯ ಫಲಾನುಭವಿಗಳು ಪಿಂಚಣಿ ವಂತಿಗೆ ವಿವರಗಳನ್ನು ಪ್ರಕಟಿಸಲಾಗಿರುವ ತಂತ್ರಾಂಶದಿಂದ ಪಡೆದು ಅದು ಸರಿ ಇರುವುದನ್ನು ಖಚಿತಪಡಿಸಿಕೊಳ್ಳುವುದು ಅತ್ಯವಶ್ಯಕವಾಗಿರುತ್ತದೆ. ಒಂದು ವೇಳೆ ವ್ಯತ್ಯಾಸಗಳೇನಾದರೂ ಕಂಡುಬಂದಲ್ಲಿ ಸಮುಚಿತ ಮಾರ್ಗದಲ್ಲಿ (through proper channel ) ಕೆಎನ್‌ಡಿಸಿಪಿಎಸ್ ಘಟಕದ ಗಮನಕ್ಕೆ ತಂದಲ್ಲಿ ಅದನ್ನು ಪರಿಶೀಲಿಸಿ ಅಗತ್ಯವಿದ್ದರೆ ಸರಿಪಡಿಸಲಾಗುವುದು. **ಸದರಿ ಕಾರ್ಯವನ್ನು ಮಾರ್ಚ್ 2017 ರ 20 ನೇ ತಾರೀಖಿನೊಳಗಾಗಿ ಪೂರ್ಣಗೊಳಿಸುವಂತೆ ನಿಗದಿಪಡಿಸಲಾಗಿದೆ.** ಈ ಯೋಜನೆಯ ಫಲಾನುಭವಿಗಳಲ್ಲಿ ಅನಕ್ಷರಸ್ಥರು / ಗಣಕ ಯಂತ್ರವನ್ನು ಉಪಯೋಗಿಸಲು ಬರದೆ ಇರುವವರು ಇದ್ದಲ್ಲಿ ಅಂತಹವರ ಪಿಂಚಣಿ ವಂತಿಗೆ ವಿವರಗಳನ್ನು ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳು ಪಡೆದು ನೌಕರರಿಗೆ ಮಾಹಿತಿ ನೀಡಿ ಸ್ವೀಕೃತಿ ಪಡೆಯುವುದು. ಮೇಲೆ ತಿಳಿಸಿದ ನಿಗದಿತ ದಿನಾಂಕದ ನಂತರ ಸದರಿ ಪಿಂಚಣಿ ವಂತಿಗೆ ವಿವರಗಳನ್ನು LIC ಸಂಸ್ಥೆಗೆ ನೀಡಲಾಗುವುದರಿಂದ ಆ ನಂತರ ವಿವರಗಳನ್ನು ತಿದ್ದುಪಡಿ ಮಾಡಲು ಸಾಧ್ಯವಾಗುವುದಿಲ್ಲವೆಂದು ತಿಳಿಯಪಡಿಸಲಾಗಿದೆ.

ಈ ಸುತ್ತೋಲೆಯನ್ನು ಲೆಕ್ಕ ಘಟಕ ಮತ್ತು ತಮ್ಮ ವ್ಯಾಪ್ತಿಯ ಇತರೆ ಕಚೇರಿಗಳ ಪ್ರಕಟಣಾ ಫಲಕಗಳಲ್ಲಿ ಪ್ರಚುರ ಪಡಿಸುವ ಜೊತೆಗೆ ಸಂಬಂದಿಸಿದ ಎಲ್ಲಾ ನೌಕರರಿಗೆ ವಿಷಯ ತಿಳಿಸಲು ಸರ್ವ ಪ್ರಯತ್ನ ಮಾಡುವಂತೆ ಕೋರಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು (ಆ ಮತ್ತು ಮಾ.ಸಂ)

ಪ್ರತಿಗಳು:

೧. ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ವಿಸಕಂಗಳು,
೨. ಆರ್ಥಿಕ ಸಲಹೆಗಾರರು, ಕವಿಪ್ರನಿನಿ / ಎಲ್ಲಾ ವಿಸಕಂಗಳು,
೩. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ ರವರಿಗೆ. ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
೪. ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಎಲ್ ರವರ ಆಪ್ತ ಕಾರ್ಯದರ್ಶಿ ರವರಿಗೆ. ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
೫. ನಿರ್ದೇಶಕರು (ಹಣಕಾಸು), ರವರ ಆಪ್ತ ಕಾರ್ಯದರ್ಶಿ ರವರಿಗೆ. ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ http:/www.kptcl.com / eprasarana** ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

೧. ಎಲ್ಲಾ ಮುಖ್ಯ ಇಂಜಿನಿಯರ್ ಕವಿಪ್ರನಿನಿ / ಎಸ್ಕಾಂಗಳು
೨. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
೩. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
೪. ಎಲ್ಲಾ ಲೆಕ್ಕಾಧಿಕಾರಿಗಳು ಕವಿಪ್ರನಿನಿ / ಎಸ್ಕಾಂಗಳು
೫. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ತನಿಖೆ) ಕವಿಪ್ರನಿನಿ / ಎಸ್ಕಾಂಗಳು